ಮುಂದೆ ಹೇಳಿದಂತೆಯೇ. ಕಮಲಿಯನ್ನು ಸುದ್ದಿ ಕಮಲಿಯೆಂದೇ ಆಡಿಕೊಳ್ಳುವುದಿತ್ತು. ಸಂಜೆ ಶಾಲೆಯಿಂದ ಮನೆಗೆ ಬರುವ ದಾರಿಯಲ್ಲಿ ಗಿರಿಜೆ ಇಂದುವಿನ ಭುಜದ ಸುತ್ತ ಕೈ ಹಾಕಿ ಏಕಾಏಕಿ, 'ಹೊಟ್ಟೆ ನೋವಿದ್ಯಾ ಇಂದಮ್ಮಾ' ಎಂದಾಗ ಅಚ್ಚರಿಯಿಂದ ಇಂದು, 'ಆ...' ಎಂದಿದ್ದಳು. 'ಅಯ್ಯೋ, ಬಿಡಿ ಇಂದಮ್ಮ. ಕಮಲಿ ಹೇಳಿದಳು. ಹೊರಗೆ ಕೂತ್ರಂತೆ' ಎಂದೂ, 'ಬಿಳಿ ದಾಸಾಳದ ಹೂ ತುಪ್ಪದಲ್ಲಿ ಹುರಿದು ತಿಂದು ಬಿಡಿ, ಹೊಟ್ಟೆ ನೋವೆಲ್ಲ ಮಾಯ! ನಿಮ್ಮ ಅಮ್ಮನೇ ಹೇಳಿದ ಮುಷ್ಟಿ ಅದು. ನನಗೂ ನಿಮ್ಮ ಅಮ್ಮ ಒಮ್ಮೆ ಮಾಡಿ ಕೊಟ್ಟಿದ್ದರು' ಎಂದು ನಕ್ಕಿದ್ದಳು. 'ಯಾರಿಗೂ ಹೇಳ್ಬೇಡ್ವೆ, ಆಯಿ ಹೇಳಿದ್ದಾರೆ' ಅಂದ್ರೆ,

'ಅಯ್ಯೋ, ಅದ್ರಲ್ಲೇನು ಗುಟ್ಟು. ಎಲ್ರೂ ಆಗೋದೆ. ಮುಟ್ಟಾಗೋದು ಅಂದ್ರೆ ದೊಡ್ಡವರಾಗೋದು. ಮುಟ್ಟು, ಗಂಡು ಹೆಣ್ಣು ಸೇರೋದು, ಗರ್ಭಿಣಿ ಆಗೋದು ಎಲ್ಲ ಮಾಮೂಲಲ್ವ ಇಂದಮ್ಮ.'

'ಗಂಡು ಹೆಣ್ಣು ಸೇರೋದು ಅಂದ್ರೆ...'

'ನೀವು ನಾಯಿಗಳು ಜೊತೆಯಾಗಿದ್ದು ನೋಡಿಲ್ವ.'

'ಛೀ, ನೋಡಬಾರ್ದು ಅಂದಿದಾಳೆ ಆಯಿ.'

'ಹಾಗೇ, ಗಂಡು ಹೆಣ್ಣು.' ನಕ್ಕಳು.

'ನೀನು ನೋಡಿದ್ದೀಯಾ.'

'ಹು, ಈ ಕಮಲಿಯ ಅವತಾರ ನೋಡಿಲ್ವ, ಗುಡ್ಡೆಯಲ್ಲಿ ಚನ್ನನ ಜೊತೆಯಲ್ಲಿ ಮಲಗಿದ್ಲು.'

'ಮತ್ತೆ.'

'ಮತ್ತೇನು, ಮುಟ್ಟು ನಿಂತಾಗಲೇ ಗೊತ್ತಾಗಿದ್ದು.'

'ಅಂದ್ರೆ...'

'ಇಂದಮ್ಮ, ಮುಟ್ಟಾಗದೇ ಇದ್ದಾಗ ಅವಳಮ್ಮನಿಗೆ ಗೊತ್ತಾಯ್ತು ಅವಳು ಗರ್ಭಿಣಿ ಅಂತ.'

'ಮುಟ್ಟಾಗದೇ ಇದ್ರೆ ಗರ್ಭಿಣಿ ಅಂತಾನಾ.'

'ಅಯ್ಯೋ ಮಗು ನೀವು! ಗರ್ಭಿಣಿ ಅಂತಾದಾಗ ಮುಟ್ಟು ನಿಲ್ಲುತ್ತೆ.'

ಆ ಕ್ಷಣ, ಇಂದುವಿನ ಕಣ್ಣಲ್ಲಿ ಗಿರಿಜೆ ಅಂದ್ರೆ ಓಹ್, ಭಯಂಕರ ವಿಷಯಗಳು ಗೊತ್ತಿದೆ ಇವಳಿಗೆ, ಆಯಿಗಿಂತಲೂ ಜಾಣೆ ಇವಳು ಎನ್ನುವ ಅಭಿಮಾನ ಹೆಚ್ಚಾಗಿ ಬಿಟ್ಟಿತ್ತು.

'ಗಿರಿಜಾ, ಜೊತೆಯಲ್ಲಿ ಮಲಗಿದ್ರೆ ಗರ್ಭಿಣಿ ಆಗ್ತಾರಾ.'

ಬಿದ್ದು ಬಿದ್ದು ನಗತೊಡಗಿದ್ದಳು ಗಿರಿಜಾ, ಅದೆಷ್ಟು ಅವಮಾನವಾಗಿತ್ತು ಇಂದುವಿಗೆ.

'ಅದೆಲ್ಲ ನಿಮಗೂ ಮದ್ವೆಯಾದಾಗ ಗೊತ್ತಾಗುತ್ತೆ ಇಂದಮ್ಮ' ಎಂದು ಕೆನ್ನೆ ಹಿಂಡಿದ್ದಳು.

ಮರುದಿನ ಕ್ಲಾಸಿನಲ್ಲಿ ಪಕ್ಕದಲ್ಲಿ ಕೂರುವ ಉಷಾಳಿಗೆ, 'ನಿಂಗೊತ್ತಾ, ಮುಟ್ಟು ನಿಂತ್ರೆ ಗರ್ಭಿಣಿ ಅಂತ! ಗಿರಿಜೆ ಹೇಳಿದ್ಲು' ಎಂದು ಹೆಮ್ಮೆಯಿಂದ ಹೇಳಿದ್ದೂ ಉಷಾ ಕಣ್ಣರಳಿಸಿ ಕೇಳಿದ್ದೂ ನಿನ್ನೆ ಮೊನ್ನೆಯಂತಿದೆ!

ನಸು ನಗು ಮೂಡಿತು, ಇಂದುವಿನ ಮುಖದಲ್ಲಿ. ಎಷ್ಟು ಮುಗ್ಧ ದಿನಗಳವು. ಬಸ್ಸಿನ ಕಿಟಕಿ ಮೆಲ್ಲನೆ ಸರಿಸಿದಳು. ತಣ್ಣನೆಯ ಗಾಳಿ ಮೈ ಸೋಕಿದಾಗ ಇಂದು ಮುದುಡಿ ಕೂತಳು. ಹೊರ ನೋಡಿದರೆ ಅಲ್ಲೊಂದು ಇಲ್ಲೊಂದು ಕಾಣುವ ಮಿಣುಕು ದೀಪಗಳು. ಕತ್ತಲಿಗೆ ಕಣ್ಣು ಹೊಂದಿಕೆಯಾಗುತ್ತಿದ್ದಂತೆ ಗಿರಿಜೆಯೇ ಕಣ್ಣ ತುಂಬ!

ಇಂದು ಒಂಬತ್ತನೆಯ ಕ್ಲಾಸಿಗೆ ಬಂದಾಗ ಏಕಾಏಕಿ ಗಿರಿಜೆ ಶಾಲೆಗೆ ಬರುವುದನ್ನೇ ನಿಲ್ಲಿಸಿದಳು. ಇಂದುವಿಗೆ ಗಿರಿಜೆಯಿಲ್ಲದೇ ಶಾಲೆಗೆ ಹೋಗಲು ಮನಸ್ಸಿರಲಿಲ್ಲ. ಅದಕ್ಕಿಂತಲೂ ಬೇಸರವಾಗಿದ್ದು ಮೂಲೆಮನೆ ವಿಠ್ಠ ಕಕ್ಕನ ಮನೆಗೆ ಕೆಲಸಕ್ಕೆ ಹೋಗಲು ಆರಂಭ ಮಾಡಿದಾಗ. 'ಯಾಕೆ ಆಯಿ